ಜಮೀನು ಇದೆ, ಅದನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಇವರಿಗೆ ಹಂಚುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ಸ್ಪಷ್ಟವಾಗಿ ಹೇಳಬೇಕು ?

ಶ್ರೀ ಎಂ.ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಉತ್ತಮವಾಗಿರತಕ್ಕಂಥ ಸಲಹೆ. ಈಗಾಗಲೇ ಸುತ್ತೋಲೆಯಲ್ಲಿ ಅದಕ್ಕೆ ಬೇಕಾಗಿರತಕ್ಕಂಥ ಮಾರ್ಗ ಸೂಚಿಯನ್ನೂ ಕೊಟ್ಟಿದ್ದೇವೆ. ಎಲ್ಲೆಲ್ಲಿ ಸರ್ಕಾರಿ ಜಮೀನು ಸಿಗುತ್ತದೆ ಅಲ್ಲಿ, ಅಥವಾ ಕಡಿಮೆ ದರದಲ್ಲಿ ಭೂಮಿ ಸಿಗುವುದಾಗಿದ್ದರೆ ಅದನ್ನು ಕೊಂಡು ಫಲಾನುಭವಿಗಳಿಗೆ ಕೊಡಬೇಕು ಎನ್ನತಕ್ಕಂಥಾದ್ದೇ ಸರ್ಕಾರದ ಉದ್ದೇಶ. ಆ ಪ್ರಕಾರವಾಗಿ ಮೈಸೂರಿನಲ್ಲಿ ೯೧೮೯ ಫಲಾನುಭವಿಗಳಿಗೆ, ಮಂಡ್ಯದಲ್ಲಿ ೧೧೩೭ ಫಲಾನುಭವಿಗಳಿಗೆ, ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ೧೧೦೮ ಫಲಾನುಭವಿಗಳಿಗೆ, ಹಾಸನದಲ್ಲಿ ೮ ಫಲಾನುಭವಿಗಳಿಗೆ ಪುನರ್ವಸತಿ ಕೇಂದ್ರಗಳ ಕೆಲಸಗಳನ್ನು ಮಾಡಬೇಕು ಎಂದೂ ಈಗಾಗಲೇ ೧೯೮೮–೮೯ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ತಾಕೀತು ಮಾಡಲಾಗಿದೆ. ಹಣ ಕೂಡ ಬಿಡುಗಡೆ ಮಾಡಲಾಗಿದೆ ಆ ಕಾರ್ಯಕ್ರಮವು ಕೂಡ ಕೆಗೆದುಕೊಳ್ಳುತ್ತಾ ಇದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅಂತಹ ಜಮೀನುಗಳನ್ನು ಇಂತಹವರಿಗೆ ಕೊಡಬೇಕು ಎಂದೂ ನಿಯಮಾವಳಿ ಮಾಡಿದ್ದೇವೆ. ಅದರ ಪ್ರಕಾರ ಇಂಥಾದ್ದು ಎಲ್ಲೆಲ್ಲಿದೆ ಅಂಥಾದ್ದು ತೆಗೆದುಕೊಂಡು ಆದೇಶ ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳಿದೆ.

ಶ್ರೀ ಎಂ.ಪಿ. ಪ್ರಕಾಶ್.—ಇದು ಬಹಳ ಒಳ್ಳೆಯ ಉತ್ತಮವಾದಂಥ ಸಲಹೆ. ಹೆಚ್ಚುವರಿ ಜಮೀನನ್ನು ಇದರಲ್ಲಿ ಒಡತನದ ಸೀಮಾರೇಖೆ ಕೆಳಗೆ ಇರತಕ್ಕಂಥ ಜನಗಳಿಗೆ ಕೊಡಬೇಕು, ಭೂರಹಿತರಿಗೆ ಕೊಡಬೇಕು ಎಂದೂ ಇದೆ. ಜೀತ ವಿಮುಕ್ತರಿಗೂ ಕೊಡಬೇಕು ಎನ್ನತಕ್ಕಂಥಾದ್ದು ಬಹಳ ಯೋಗ್ಯವಾದಂಥ ಸಲಹೆ. ಆ ರೀತಿಯಾದಂಥ ಸುತ್ತೋಲೆಯನ್ನು ಕೂಡ ಹೊರಡಿಸಲಾಗುವುದು.

ನಗರಾಭಿವೃದ್ಧಿ ಮಂಡಳಿಗಳು ಪಾಸು ಮಾಡಿದ ಠರಾವುಗಳು ಮತ್ತು ಆದೇಶಗಳನ್ನು ತಡೆ ಹಿಡಿದಿರುವುದು

೨೧೦೧. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧–೧–೧೯೮೮ರ ಬಳಿಕ ಅನುಷ್ಠಾನಕ್ಕೆ ತಂದಿರುವ ನಗರಾಭಿವೃದ್ಧಿ ಸಮಿತಿಯು ನಿರ್ಣಯಗಳು ಅನುದಾನಗಳಿಗೆ ತಡೆಹಿಡಿಯಲು ರಾಜ್ಯ ಸರ್ಕಾರ ಆದೇಶವನ್ನು ನೀಡಿದೆಯೇ ?

ಆ) ಹಾಗೆ ತಡೆ ಹಿಡಿಯಲು ಅನಿವಾರ್ಯ ವೆನಿಸಿದ ಕಾರಣಗಳಾದರೂ ಯಾವುವು ?

ಇ) ಆ ಪೈಕಿ ಅನಗತ್ಯವೆನಿಸುವ ತಡೆಯನ್ನು ರದ್ದುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು, ದಿನಾಂಕ ೧–೧–೧೯೮೮ ರ ಬಳಿಕ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಗುಲ್ಬರ್ಗಾ ಮತ್ತು ಮಂಗಳೂರು ನಗರಾಭಿವೃದ್ಧಿ ಮಂಡಳಿಗಳು ಪಾಸು ಮಾಡಿದ ಠರಾವುಗಳನ್ನು ಮತ್ತು ಆದೇಶಗಳನ್ನು ತಡೆಹಿಡಿಯಲಾಗಿದೆ. ಆದರೆ ಅನುದಾನಗಳಿಗೆ ಸಂಬಂಧಿಸಿದಂತೆ ಯಾವ ತಡೆಯನ್ನು ನೀಡಿಲ್ಲ.

ಆ) ೧೯೮೭ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮಗಳ ಪ್ರಕಾರ ನಗರಾಭಿವೃದ್ಧಿ ಮಂಡಳಿಗಳನ್ನು ಮತ್ತು ನಗರಯೋಜನಾ ಪ್ರಾಧಿಕಾರಗಳನ್ನು ವಿಲೀನಗೊಳಿಸಿ ನಗರಾಭಿವೃದ್ಧಿ ಪ್ರಾಧಿಕಾರಗಳೆಂದು ದಿನಾಂಕ ೧–೧–೮೮ ರಿಂದ ಜಾರಿಗೆ ತರಲಾಗಿದೆ. ಆದುದರಿಂದ ಯಾವುದೇ ತರಹದ ಲೋಪದೋಷಗಳು ಆಗಬಾರದೆಂಬ ಮುನ್ನೆಚ್ಚರಿಕೆಯಿಂದ ಮೇಲಿನಂತೆ ನಿರ್ದೇಶನ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಯಲ್ಲಿ ದಿನಾಂಕ ೧-೧-೧೯೮೮ರ ಬಳಿಕ ಅನುಷ್ಠಾನಕ್ಕೆ ತಂದಿರುವ ನಗರಾಭಿವೃದ್ಧಿ ಸಮಿತಿಯ ನಿರ್ಣಯಗಳು ಅನುದಾನ ಗಳಿಗೆ ತಡೆಹಿಡಿಯಲು ರಾಜ್ಯ ಸರ್ಕಾರ ಆದೇಶವನ್ನು ನೀಡಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ, ಆದರೆ ಅನುದಾನಗಳಿಗೆ ಸಂಬಂಧಿಸಿದಂತೆ ಯಾವ ತಡೆಯನ್ನೂ ನೀಡಿಲ್ಲ ಎಂದು ಉತ್ತರದ ಕೊನೆಯಭಾಗದಲ್ಲಿ ಹೇಳಿದ್ದಾರೆ. ಈ ಎರಡಕ್ಕೂ ಸಮಂಜಸವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಇದಕ್ಕೆ ಕ್ಲಾರಿಫಿಕೇಷನ್ ಕೊಡಬೇಕು ಎಂದು ಕೋರುತ್ತೇನೆ. ಎರಡನೆಯದು, ದಿನಾಂಕ ೧-೧-೧೯೮೮ ರಿಂದ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾನೂನು ಜಾರಿಗೆ ಬಂತು, ಅಲ್ಲಿಂದೀಚೆಗೆ ನಗರಾಭಿವೃದ್ಧಿ ಮಂಡಲಿಯವರು ಮಾಡಿರತಕ್ಕಂಥ ಕೆಲಸಗಳ ಬಗ್ಗೆ ತಡೆ ಹಿಡಿಯಲಾಗಿದೆ ಎಂದು ಹೇಳಿದ್ದಾರೆ. ಅದನ್ನು ಜಾರಿಗೆ ತರಲಾಗಿದೆ ಎಂದು ಹೇಳಿದ್ದಾರೆ. ಇದು ೧-೧-೧೯೮೮ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಜಾರಿಗೆ ಬಂದಮೇಲೆ ನಗರಾಭಿವೃದ್ಧಿ ಮಂಡಲಿಯವರು ಹೇಗೆ ಇರಲಿಕ್ಕೆ ಸಾಧ್ಯ ಎನ್ನುವುದು ಎರಡನೇ ಪ್ರಶ್ನೆ. ಮೂರನೆಯದು, ಈ ರೀತಿ ೧-೧-೧೯೮೮ ರಂದು ಸರ್ಕಾರದವರು ತಡೆಯಾಜ್ಞೆ ಕೊಟ್ಟಿದ್ದಾರೆ. ಇದೇರೀತಿಯಾಗಿ ಅನೇಕ ನಿಗಮಗಳ ಅಧ್ಯಕ್ಷರುಗಳು ರಾಜೀನಾಮೆ ಕೊಟ್ಟು ಅವು ಅಂಗೀಕಾರ ವಾಗಿದೆ. ಅವುಗಳ ಬಗ್ಗೆ ಏನಾದರೂ ಈರೀತಿ ಕಾರ್ಯಕ್ರಮ ಅಂದರೆ ತಡೆಹಿಡಿಯುವ ಕಾರ್ಯಕ್ರಮ ತೆಗೆದುಕೊಡಿದ್ದೀರಾ ಎನ್ನುವುದಕ್ಕೆ ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು ಎಂದು ನಾನು ಕೋರುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮೊದಲನೆಯದಾಗಿ ಹೌದು ಎಂದು ಉತ್ತರ ಕೊಟ್ಟಿದೆ. ತಡೆ ನೀಡ ಲಾಗಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರ ಕೊಟ್ಟಿದೆ. ೧-೧-೧೯೮೮ರ ದಿನದಿಂದ ಅದರಲ್ಲಿ ವಿವರವಾಗಿ ಕೊಟ್ಟಹಾಗೆ ಕಾರ್ಯಕ್ರಮಗಳ ಬಗ್ಗೆ ತಡೆ ನೀಡಿದೆ, ಆದರೆ ಅನುದಾನಗಳ ಬಗ್ಗೆ ಪ್ರತ್ಯೇಕವಾಗಿ ಕೇಳಿದ್ದಾರೆ. ಅನುದಾನಗಳಿಗೆ ತಡೆನೀಡಿಲ್ಲ ಠರಾವುಗಳಲ್ಲಿ ಲೋಪದೋಷಗಳು ಏನಾದರೂ ಇದ್ದು ಅವರು ತೀರ್ಮಾನ ತೆಗೆದುಕೊಂಡಿದ್ದರೆ ಅದು ಸಮಂಜಸವಾಗಿ ಕಾಣುವುದಿಲ್ಲ. ಅದು ಕಾನೂನಿಗೆ ವಿರುದ್ಧ ವಾಗಿ ಏನಾದರೂ ಆಗಬಹುದು ಎನ್ನುವಂಥ ಅಭಿಪ್ರಾಯದಿಂದ ತಡೆನೀಡದೆ. ಅದನ್ನು ಈಗ ಪ್ರತ್ಯೇಕ ವಾಗಿ ವಿಚಾರ ಮಾಡಿಕೊಳ್ಳುತ್ತೇವೆ. ಯಾವುದೇ ಕಾನೂನು ಬಾಹಿರವಾದಂಥ ತೀರ್ಮಾನ ತೆಗೆದು ಕೊಂಡಿಲ್ಲ. ಹಾಗೆ ಏನಾದರೂ ಇತ್ತು ಅಂದರೆ ಅದನ್ನು ಪರಿಶೀಲನೆಮಾಡಿ ಸರ್ಕಾರ ಕ್ರಮ ತೆಗೆದು ಕೊಳ್ಳುತ್ತದೆ. ಎರಡನೆಯದಾಗಿ, ಅವರು ಇದೇರೀತಿಯಾಗಿ ಬೇರೆ ಪ್ರಾಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಂಡಿದ್ದೀರಾ ಎಂದು ಕೇಳಿದ್ದಾರೆ. ಇದು ಏನಿದ್ದರೂ ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರಪಾಲಿನ ಪ್ರದೇಶಗಳಲ್ಲಿ ಇರುವಂಥ ಸಂಸ್ಥೆಗಳನ್ನು ಮಾತ್ರ ತೆಗೆದುಕೊಂಡಿದೆ, ಮಿಕ್ಕ ಯಾವುದರ ಮೇಲೂ ತೆಗೆದುಕೊಂಡಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—೧-೧-೮೮ ರಿಂದೀಚೆಗೆ ಅನೇಕ ಠರಾವುಗಳನ್ನು ಮಂಡಳಿಗಳ ವರು ಮಾಡಿದ್ದಾರೆ. ಆ ಠರಾವುಗಳಲ್ಲಿ ಆರ್ಥಿಕವಾಗಿ ದುರ್ಬಲವರ್ಗದವರಿಗೆ ನಿವೇಶನ ಕೊಡಲಿಕ್ಕೆ ಮತ್ತು ಮನೆ ಕಟ್ಟಲಿಕ್ಕೆ ಠರಾವು ಮಾಡಿದ್ದಾರೆ. ಅವುಗಳನ್ನೂ ಕೂಡ ತಡೆಹಿಡಿದ್ದಾರೆಯೇ ಎಂಬುದರ ಬಗ್ಗೆ ಉತ್ತರ ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ- ಪ್ರಾಧಿಕಾರದ ಅಧ್ಯಕ್ಷರೂ ಕೂಡ ಈಗ ನೇಮಕವಾಗಿದ್ದಾರೆ. ಅವರಿಂದ ವರದಿಯನ್ನು ಪಡೆದು ನಿಯಮದ ಪ್ರಕಾರವಾಗಿ ಯಾವ ರೀತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತೇವೆ. ಅದನ್ನು ತಡೆಹಿಡಿಯುವುದಿಲ್ಲ. ಆದರೆ ಮಿಕ್ಕ ವಿಚಾರದಲ್ಲಿ ಏನಾದರೂ ಕಾನೂನು ಬಾಹಿರವಾಗಿ ತೀರ್ಮಾನಗಳು ಆಗಿದ್ದರೆ ಅವುಗಳ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ಕೊಡಗಿನಲ್ಲಿ ಕ್ರೀಡಾಂಗಣದ ನಿರ್ಮಾಣ

೧೯೭೨. ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗಿನಲ್ಲಿ ಕ್ರೀಡಾಂಗಣ ಪೂರ್ಣ ಗೊಂಡಿದಿಯೇ ?